# ಸರ್ಕಾರಿ ಪ್ರೌಢ ಶಾಲೆ ಕಡ್ತೂರು,
## ತೀರ್ಥಹಳ್ಳಿ ತಾ. ಶಿವಮೊಗ್ಗ ಜಿಲ್ಲೆ.

ರಾಘವೇಂದ್ರ ಭಟ್–9483810224

**ಗುರಿ 100 %– ಭರವಸೆಯ ಬೆಳಕು–ವಿಜ್ಞಾನ ಕಿರಣ.**

ಪ್ರತಿ ದಿನ 10 ಪ್ರಶ್ನೋತ್ತರಗಳು ಮತ್ತು ಒಂದು ಚಿತ್ರ. ದಿನಾಂಕ:5/2/2019

1. ಮೆಗ್ನೀಸಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು ಏಕೆ?

ಉ: ಮೆಗ್ನೀಸಿಯಂ ಆಕ್ಸಿಜನ್‌ನೊಂದಿಗೆ ವರ್ತಿಸಿ ಉಂಟಾಗುವ ಮೆಗ್ನೀಸಿಯಂ ಆಕ್ಸೈಡ್ ಪದರವನ್ನು ತೆಗೆಯಲು.

2. ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉ: ರಾಶಿ ಸಂರಕ್ಷಣೆಯ ನಿಯಮವನ್ನು ಪಾಲಿಸಲು.

3. ಸಂಯೋಗ ಕ್ರಿಯೆ ಮತ್ತು ವಿಭಜನ ಕ್ರಿಯೆಗಳ ನಡುವೆ ವ್ಯತ್ಯಾಸ ತಿಳಿಸಿ–ಉದಾಹರಣೆ ಕೊಡಿ.

| | ಸಂಯೋಗ ಕ್ರಿಯೆ | ವಿಭಜನ ಕ್ರಿಯೆ |
|---|---|---|
| | ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟಾಗುತ್ತದೆ | ಒಂದು ಪ್ರತಿವರ್ತಕವು ಎರಡು ಅಥವಾ ಹೆಚ್ಚು ಸರಳ ಉತ್ಪನ್ನಗಳಾಗಿ ವಿಭಜನೆಯಾಗುತ್ತದೆ. |
| ಉದಾ | $CaO + H_2O \rightarrow Ca(OH)_2$ | $CaCO_3 \rightarrow CaO + CO_2$ |

4. ಅಂತರುಷ್ಣಕ ಕ್ರಿಯೆ ಮತ್ತು ಬಹಿರುಷ್ಣಕ ಕ್ರಿಯೆಗಳ ನಡುವೆ ವ್ಯತ್ಯಾಸ ತಿಳಿಸಿ–ಉದಾಹರಣೆ ಕೊಡಿ.

| | ಅಂತರುಷ್ಣಕ ಕ್ರಿಯೆ | ಬಹಿರುಷ್ಣಕ ಕ್ರಿಯೆ |
|---|---|---|
| | ಶಕ್ತಿಯ ಹೀರಿಕೆಯಾಗುವ ಕ್ರಿಯೆಗಳು | ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ಕ್ರಿಯೆಗಳು |
| ಉದಾ | $CaCO3 \rightarrow CaO + CO2$ | $CaO + H_2O \rightarrow Ca(OH)_2$ |

5. ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವೆ ವ್ಯತ್ಯಾಸ ತಿಳಿಸಿ–ಉದಾಹರಣೆ ಕೊಡಿ.

| | ಸ್ಥಾನಪಲ್ಲಟ ಕ್ರಿಯೆ | ದ್ವಿಸ್ಥಾನಪಲ್ಲಟ ಕ್ರಿಯೆ |
|---|---|---|
| | ಹೆಚ್ಚು ಕ್ರಿಯಾಪಟು ಧಾತು ಕಡಿಮೆ ಕ್ರಿಯಾಪಟು ಧಾತುವನ್ನು ಅದರ ದ್ರಾವಣದಿಂದ ಸ್ಥಾನಪಲ್ಲಟಗೊಳಿಸುವುದು. | ಪ್ರತಿವರ್ತಕಗಳ ನಡುವೆ ಅಯಾನುಗಳ ವಿನಿಮಯ ನಡೆಯುವುದು. |
| ಉದಾ | $Fe + CuSO_4 \rightarrow FeSO_4 + Cu$<br>(ದಟ್ಟ ನೀಲಿ) (ತಿಳಿ ನೀಲಿ) | $BaCl_2(aq) + Na_2SO_4(aq) \rightarrow 2NaCl(aq) + BaSO_4(s)$ |

6. ಕೋಶೀಯ ಉಸಿರಾಟ,ಕಾಂಪೋಸ್ಟ್ ಉಂಟಾಗುವಿಕೆ, ದಹನಕ್ರಿಯೆ–ಇವುಗಳನ್ನು ಬಹಿರುಷ್ಣಕ ಕ್ರಿಯೆಗಳೆನ್ನುವುದೇಕೆ?

ಉ: ಈ ಕ್ರಿಯೆಗಳಲ್ಲಿ ಉಷ್ಣ ಬಿಡುಗಡೆಯಾಗುತ್ತದೆ.

7. ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆಗಳ ನಡುವೆ ವ್ಯತ್ಯಾಸ ತಿಳಿಸಿ–ಉದಾಹರಣೆ ಕೊಡಿ.

| | ಉತ್ಕರ್ಷಣ | ಅಪಕರ್ಷಣ |
|---|---|---|
| 1 | ಆಕ್ಸಿಜನ್ ಪಡೆದುಕೊಳ್ಳುವುದು | ಆಕ್ಸಿಜನ್ ಕಳೆದುಕೊಳ್ಳುವುದು |
| 2 | ಹೈಡ್ರೋಜನ್ ಕಳೆದುಕೊಳ್ಳುವುದು | ಹೈಡ್ರೋಜನ್ ಪಡೆದುಕೊಳ್ಳುವುದು. |
| ಉದಾ | $2Cu + O_2 \rightarrow 2CuO$(ಕಪ್ಪು ಬಣ್ಣ)<br>(Cu ಉತ್ಕರ್ಷಣಗೊಂಡು– CuO ಆಗಿದೆ) | $CuO + H_2 \rightarrow Cu + H_2O$<br>(CuO ಅಪಕರ್ಷಣಗೊಂಡು – Cu ಆಗಿದೆ.) |

8. ಉತ್ಕರ್ಷಣ–ಅಪಕರ್ಷಣ (ರೆಡಾಕ್ಸ್) ಕ್ರಿಯೆಗಳು ಎಂದರೇನು?

ಉ: ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡು ಮತ್ತೊಂದು ಪ್ರತಿವರ್ತಕವು ಅಪಕರ್ಷಣಗೊಳ್ಳುವುದು.

9. ನಶಿಸುವಿಕೆ ಎಂದರೇನು?ಉದಾಹರಣೆ ಕೊಡಿ

ಉ: ಲೋಹವು ಆಮ್ಲಜನಕ,ತೇವಾಂಶ,ಆಮ್ಲಗಳಿಂದ ಆಕ್ರಮಿಸಲ್ಪಡುವ ಪ್ರಕ್ರಿಯೆ. ಉದಾ: ಕಬ್ಬಿಣ ತುಕ್ಕು ಹಿಡಿಯುವುದು, ಬೆಳ್ಳಿಯ ಮೇಲಿನ ಕಪ್ಪು ಲೇಪನ(ಬೆಳ್ಳಿಯ ಸಲ್ಫೈಡ್) ಮತ್ತು ತಾಮ್ರದ ಮೇಲಿನ ಹಸಿರು ಲೇಪನ(ತಾಮ್ರದ ಕಾರ್ಬೋನೇಟ್)

10. ಕಮಟುವಿಕೆ ಎಂದರೇನು? ಕಮಟುವಿಕೆ ತಡೆಗಟ್ಟುವ 2 ಕ್ರಮಗಳನ್ನು ತಿಳಿಸಿ.

ಉ: ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣಗೊಂಡು ಅವುಗಳ ವಾಸನೆ ಮತ್ತು ರುಚಿ ಬದಲಾಗುವುದು. ತಡೆಗಟ್ಟುವ ಕ್ರಮಗಳು: ಪ್ರತಿ ಉತ್ಕರ್ಷಕಗಳನ್ನು ಸೇರಿಸುವುದು, ಗಾಳಿ ಪ್ರವೇಶಿಸದ ಸಂಗ್ರಾಹಕಗಳಲ್ಲಿ ಶೇಖರಿಸುವುದು, ನೈಟ್ರೋಜನ್‌ನಂತಹ ಅನಿಲವನ್ನು ಹಾಯಿಸುವುದು. + ಚಿತ್ರ– 6.6 ಮಾನವನ ಜೀರ್ಣಾಂಗವ್ಯೂಹ

Vijnanakirana9483810224

ದಿನಾಂಕ : 06/02/2019

**11. ತಟಸ್ಥೀಕರಣ ಕ್ರಿಯೆ ಎಂದರೇನು?**

ಉ: ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆಯಿಂದ ಲವಣ ಮತ್ತು ನೀರು ಉಂಟಾಗುವುದು.

**12. ಮೊಸರು ಮತ್ತು ಹುಳಿ ಪದಾರ್ಥಗಳನ್ನು ಹಿತ್ತಾಳೆ ಮತ್ತು ತಾಮ್ರದ ಅಥವಾ ಲೋಹದ ಪಾತ್ರೆಗಳಲ್ಲಿ ಏಕೆ ಸಂಗ್ರಹಿಸಿ ಇಡಬಾರದು?**

**ಉ:** ಮೊಸರು ಮತ್ತು ಹುಳಿ ಪದಾರ್ಥಗಳಲ್ಲಿರುವ ಆಮ್ಲವು ಹಿತ್ತಾಳೆ ಮತ್ತು ತಾಮ್ರ ದೊಂದಿಗೆ ವರ್ತಿಸಿ ಹೈಡ್ರೋಜನ್ ಅನಿಲ ಮತ್ತು ವಿಷಕಾರಿ ವಸ್ತುಗಳನ್ನು ಉತ್ಪಾದಿಸುತ್ತದೆ.

**13. ಆಮ್ಲ/ಪ್ರತ್ಯಾಮ್ಲವನ್ನು ಸಾರರಿಕ್ತಗೊಳಿಸುವಾಗ, ಆಮ್ಲ/ಪ್ರತ್ಯಾಮ್ಲವನ್ನೇ ನೀರಿಗೆ ಸೇರಿಸಬೇಕೇ ಹೊರತು ಆಮ್ಲಕ್ಕೆ ನೀರನ್ನು ಸೇರಿಸಬಾರದು ಏಕೆ?**

**ಉ:** ಆಮ್ಲ ಮತ್ತು ಪ್ರತ್ಯಾಮ್ಲವನ್ನು ನೀರಿನಲ್ಲಿ ವಿಲೀನಗೊಳಿಸುವ ಪ್ರಕ್ರಿಯೆ ಅತಿ ಬಹಿರುಷ್ಣಕ. ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು. ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು.

**14. ವಾಷಿಂಗ್ ಸೋಡಾದ ರಾಸಾಯನಿಕ ಹೆಸರು, ಸೂತ್ರ ಮತ್ತು ಉಪಯೋಗ ಬರೆಯಿರಿ.**

**ಉ: ಸೋಡಿಯಂ ಕಾರ್ಬೋನೇಟ್. $Na_2CO_3.10H_2O$.**

ಗಾಜಿನ ತಯಾರಿಕೆ, ಬೋರಾಕ್ಸ್ ಉತ್ಪಾದನೆ, ನೀರಿನ ಶಾಶ್ವತ ಗಡಸುತನ ನಿವಾರಣೆ.

**15. ಅಡುಗೆ ಸೋಡಾದ ರಾಸಾಯನಿಕ ಹೆಸರು, ಸೂತ್ರ ಮತ್ತು ಉಪಯೋಗ ಬರೆಯಿರಿ.**

**ಉ: ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್, $NaHCO_3$.**

ಆಮ್ಲಶಾಮಕಗಳಲ್ಲಿ , ಬೆಂಕಿ ಆರಿಸುವ ಸೋಡಾ-ಆ್ಯಸಿಡ್ ಉಪಕರಣಗಳಲ್ಲಿ, ಬೇಕಿಂಗ್ ಪುಡಿ ತಯಾರಿಕೆ.

**16. ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ರಾಸಾಯನಿಕ ಹೆಸರು, ಸೂತ್ರ ಮತ್ತು ಉಪಯೋಗ ಬರೆಯಿರಿ.**

**ಉ: ಕ್ಯಾಲ್ಸಿಯಂ ಸಲ್ಫೇಟ್,** $CaSO_4.½H_2O$.

**ಆಟಿಕೆಗಳ ತಯಾರಿಕೆ, ಮುರಿದ ಮೂಳೆಗಳಿಗೆ ಆಧಾರವಾಗಿ ಲೇಪನ ಮಾಡಲು, ಅಲಂಕಾರಿಕ ವಸ್ತುಗಳ ತಯಾರಿಕೆ.**

**17. ಚೆಲುವೆ ಪುಡಿಯ ರಾಸಾಯನಿಕ ಹೆಸರು, ಸೂತ್ರ ಮತ್ತು ಉಪಯೋಗ ಬರೆಯಿರಿ.**

**ಉ: ಕ್ಯಾಲ್ಸಿಯಂ ಆಕ್ಸಿಕ್ಲೋರೈಡ್,** $CaOCl_2$ , ಬಟ್ಟೆ ಕಾರ್ಖಾನೆಯಲ್ಲಿ ಹತ್ತಿ ಮತ್ತು ನಾರಿಗೆ, ಕಾಗದ ಕಾರ್ಖಾನೆಯಲ್ಲಿ ಮರದ ತಿರುಳಿಗೆ ಬಿಳುಪು ನೀಡಲು ಮತ್ತು ಲಾಂಡ್ರಿಯಲ್ಲಿ ತೊಳೆದ ಬಟ್ಟೆಗೆ ಬಿಳುಪು ನೀಡಲು, ಕುಡಿಯುವ ನೀರನ್ನು ಕ್ರಿಮಿಮುಕ್ತಗೊಳಿಸಲು.

**18. ಹಲ್ಲುಗಳನ್ನು ಸ್ವಚ್ಛಗೊಳಿಸಲು ಪ್ರತ್ಯಾಮ್ಲೀಯವಾದ ಟೂಥ್ ಪೇಸ್ಟ್ ಬಳಸುವುದೇಕೆ?**

ಉ: ಬಾಯಿಯಲ್ಲಿ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯಿಂದ ಉತ್ಪತ್ತಿಯಾಗುವ ಹೆಚ್ಚುವರಿ ಆಮ್ಲವನ್ನು ತಟಸ್ಥೀಕರಿಸುವುದು.

**19. ಆಮ್ಲಮಳೆ ಎಂದರೇನು? ಅದರ ದುಷ್ಪರಿಣಾಮವೇನು?**

ಉ: ಮಳೆ ನೀರಿನ pH ಮೌಲ್ಯ 5.6 ಕ್ಕಿಂತ ಕಡಿಮೆಯಾಗುವುದು. ಇದು ಜಲಚರಗಳಿಗೆ ಅಪಾಯಕಾರಿ.

**20. ಕ್ಲೋರ್-ಅಲ್ಕಲಿ ಪ್ರಕ್ರಿಯೆ ಎಂದರೇನು? ಈ ಕ್ರಿಯೆಯ ಉತ್ಪನ್ನಗಳನ್ನು ಹೆಸರಿಸಿ.**

ಉ: ಸೋಡಿಯಂ ಕ್ಲೋರೈಡ್‌ನ ಜಲೀಯ ದ್ರಾವಣದ ಮೂಲಕ ವಿದ್ಯುತ್ಪ್ರವಾಹವನ್ನು ಹಾಯಿಸಿದಾಗ, ಅದು ವಿಭಜನೆ ಹೊಂದಿ ಸೋಡಿಯಂ ಹೈಡ್ರಾಕ್ಸೈಡ್ ಉಂಟಾಗುವ ಪ್ರಕ್ರಿಯೆ. ಈ ಕ್ರಿಯೆಯ ಉತ್ಪನ್ನಗಳು-ಕ್ಲೋರಿನ್, ಹೈಡ್ರೋಜನ್, ಸೋಡಿಯಂ ಹೈಡ್ರಾಕ್ಸೈಡ್.

**+ ಚಿತ್ರ-ವಿದ್ಯುತ್ ಮೋಟಾರ್**

**ಮುಂದುವರಿಯುವುದು** . . . . . . . . . . .

Vijnanakirana9483810224